ಶ್ರೀ ಎ. ಆರ್. ಬದರಿನಾರಾಯಣ್.—ಮಾನ್ಯ ಅಧ್ಯಕ್ಷರೇ, ಸೇಡಿನ ಮನೋಭಾವದಿಂದ ಮಾಡುತ್ತಾರೆ ಎಂದೇನು ಹೇಳಿದರು ಅದನ್ನು ನಾನು ಇಲ್ಲ ಪ್ರತಿಭಟಿಸುತ್ತೇನೆ. ಸರಕಾರದಲ್ಲಿ ಸೇಡಿನ ಮನೋಭಾವ ಎನ್ನುವುದು ಇಲ್ಲವೇ ಇಲ್ಲ. ಇದು ಒಂದನೇದು. ಎರಡನೇದು ಇನ್ನು ಏನೇನೋ ಗೊಂದಲಗಳು ನಡೆಯುತ್ತಿವೆ ಎಂದರೆ, ಅಂತಹ ಯಾವ ಗೊಂದಲವೂ ಇಲ್ಲ. ಎಲ್ಲವೂ ಸರಿಯಾಗಿ ನಡೆಯುತ್ತಿವೆ. ಇನ್ನೂ ಮೂರನೇದು ಹೈಕೋರ್ಟಿನ ತೀರ್ಪಿನದ ಬಗ್ಗೆ ಅಪೀಲು ಹಾಕಲು ಸುಪ್ರೀಂ ಕೋರ್ಟಿಗೆ ಹೋಗಲಿಲ್ಲ ಎಂದು. ಇದಕ್ಕೆ ಸುಪ್ರೀಂ ಕೋರ್ಟಿಗೆ ಹೋಗಬೇಕಾಗಿಲ್ಲ. ಇಲ್ಲೇ ಬೆಂಚು ಇದೆ, ಸುಪ್ರೀಂ ಕೋರ್ಟಿಗೇನೂ ಹೋಗಬೇಕಾದ್ದಿಲ್ಲ. ಜಡ್ಜ್‌ಮೆಂಟು ಕಾಪಿಗೆ ಅಪ್ಲೈ ಮಾಡ ಲಾಗಿತ್ತು. ಇದು ಈಗ ತಾನೇ ಬಂದಿದೆ. ಈ ಜಡ್ಜ್‌ಮೆಂಟು ಕಾಪಿಯನ್ನು ನೋಡಿ ಇನ್ನೂ ಅಪೀಲು ಮಾಡಲು ಅವಕಾಶವಿದೆ. ಬೇಕಾದರೆ ಅಪೀಲು ಮಾಡಿ ಬೆಂಚಿನ ಮೂಲಕ ಸ್ವೀ ಆರ್ಡರು ತಂದರೂ ಇದರ ಮೇಲೇನೂ ಪರಿಣಾಮ ವಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸರಕಾರಿ ಹಾಗೂ ಖಾಸಗೀ ಕಾಲೇಜು ಉಪಾಧ್ಯಾಯರುಗಳ ಮುಷ್ಕರದಿಂದಾಗಿ ಕಾಲೇಜುಗಳು ಕೆಲವು ವ್ಯಾಪಕವಿರುವ ವಿಚಾರವನ್ನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಜೊತೆಯಲ್ಲಿ ವೈನೂರು ಬನುಮಯ್ಯ ಕಾಲೇಜು ಟೀಚರುಗಳ ಬಗ್ಗೆ ಕೂಡ ನಾನು ಸರಕಾರದ ಗಮನ ಸೆಳೆದಿದ್ದೆ. ಮಾನ್ಯ ವಿದ್ಯಾ ಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳುತ್ತೇನೆ.

SRI A. R. BADARINARAYANA.--I require time till tomorrow and therefore I may kindly be permitted to make a statement tomorrow.

LAID ON THE TABLE PAPERS

MADAM SPEAKER.....Secretary may lay the papers on the Table.

THE SECRETARY.--I beg to lay -

(i) the second list of unstarred questions and answers of the Second Session.

(ii) the third list of un-starred questions and answers of the third Session.

SECOND LIST & OF SECOND SESSION, 1972

UNSTARRED QUSETION AND ANSWERS

ವರದಾನದಿಗೆ ಕಾಂಡ್ಲೆ ಹತ್ತಿರ ಅಣೆಕಟ್ಟು ಕಟ್ಟುವ ಯೋಜನೆ

೪೩. (ಅ):— ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ (ಶಿಕಾರಿ).— ಮಾನ್ಯ ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ. —

(ಅ) ಸಾಗರ ತಾಲ್ಲೂಕು ಕಾಂಡ್ಲೆ ಹತ್ತಿರ ಪ್ರವಾಹ ನಿಯಂತ್ರಣ ಕ್ರಮವಾಗಿ ವರದಾನದಿಗೆ ಆಡ್ಡಕಟ್ಟೆ ಕಟ್ಟುವ ಯೋಜನೆ ಕೇಂದ್ರದ ಮಾಜೂ ರಾತಿಗೆ ರಾಜ್ಯ ಸರಕಾರ ಕಳುಹಿಸಿದ ತಾರೀಖು ಯಾವುದು ;

(ಆ) ಈ ವರದಾನದಿಗೆ ಬನವಾಸಿ ಹತ್ತಿರ ಕಟ್ಟೆಕಟ್ಟುವ ಯೋಜನೆ ಸರ ಕಾರದ ಪರಿಶೀಲನೆಯಲ್ಲಿದೆಯೆ ;

(ಇ) ಹಾಗಾದರೆ ಅದು ಯಾವಾಗ ಕಾರ್ಯಗತವಾಗುತ್ತದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ (ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು : —

(ಅ) ಕಾಂಡ್ಲೆ ಯೋಜನೆಯು ಇನ್ನೂ ತನಿಖೆಯಲ್ಲಿದೆ.

(ಆ) ಬನವಾಸಿ ಹತ್ತಿರ ವರದಾನದಿಗೆ ಕಟ್ಟೆಕಟ್ಟುವ ಯಾವ ಯೋಜನೆಯೂ ಪರಿಶೀಲನೆಯಲ್ಲಿಲ್ಲ.

(ಇ) (ಅ) ಉತ್ತರದ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭೂಹೀನರಿಗೆ ಭೂಮಿಯನ್ನು ಹಂಚುವುದು.

೪೪. (೨೨) ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಶಿಕಾರಿ) .... ಕಂದಾಯ ಮಂತ್ರಿಗಳು ದಯೆಯಿಟ್ಟು ಈ ವಿಷಯಗಳನ್ನು ತಿಳಿಸುವರೇ :—